## ಮನದ ಭಾಷೆಯ
## ‘ಚೆನ್ನುಡಿ’

‘ನಾವಾಡುವ ನುಡಿಯೇ ಕನ್ನಡ ನುಡಿ’ ಅಂತ ಅಣ್ಣಾವ್ರು ಹಾಡಿದಾಗಲೆಲ್ಲ, ನಮ್ಮ ಮನೆಯ ನುಡಿ ನಮ್ಮ ಮನಸಿಗೆ ಬರುತ್ತದೆ. ಕನ್ನಡದ ವೈವಿಧ್ಯಮಯ ಧಾಟಿಯ ಮಾತುಗಳಲ್ಲಿ ಕನ್ನಡ ನುಡಿ ಸಿರಿವಂತಿಕೆ ಈ ‘ಚೆನ್ನುಡಿ’ ಸರಣಿಯಲ್ಲಿ ಪ್ರಕಟವಾಗಲಿದೆ. ಕನ್ನಡ ಭಾಷೆಯ ಧ್ವನಿ ಕೇಳಲು **ಪ್ರಜಾವಾಣಿಯ ಕನ್ನಡ ಧ್ವನಿ ಪಾಡ್‌ಕಾಸ್ಟ್** ಕೇಳಿ. ಪ್ರತಿ ಗುರುವಾರ ಬೆಳಗ್ಗೆ 9 ಗಂಟೆಗೆ ಈ ಸರಣಿಯ ಲೇಖನದ ಓದು ನಿಮ್ಮ ಕೇಳ್ವಿಕೆಗೆ ಪ್ರಸಾರವಾಗಲಿದೆ.


ಹಸಿರು ಬೆಟ್ಟಗಳ ನಡುವಿನ ಸುಂದರ ಉಂಚಳ್ಳಿ ಜಲಪಾತ

ಜನಿಸಿದ ‘ಹಣ್ಣ ಮೆದ್ದಳೆ ದೇವಕಿಯು’ ಹಾಡಿಂದ ಶುರುವಾಗಿ ನೈವೇದ್ಯ, ಪೂಜೆ, ಆರತಿ, ಹೂ ಬೇಡಿದ್ದು ಹೀಂಗೆ ಎಲ್ಲ ಹಾಡನ್ನೂ ಹೇಳ್ಲೇಬೇಕು.

ಮುಂದೆ ಚೌತಿ ಹಬ್ಬ ಬಂದಾಗಂತೂ ಮೂರು, ಕೆಲವರ ಮನೆಲ್ಲಿ ಐದ್ದಿನ ಹಬ್ಬ ಅಬ್ಬಬ್ಬಾ, ಸಾಕಾಗೋಗ್ತು ಹೆಂಗಸ್ರಿಗೆ. ಗೌರಿತದಿಗೆ ದಿನ ಗೌರಿಯಾಗಿ ಅದೆಷ್ಟೋ ನಮ್ಮಿ ತರಕಾರಿ, ಹಣ್ಣು, ಕಾಯಿಗಳನ್ನ ಫಲವಳಿಗೆ ಕಟ್ಟದು, ‘ಕಟ್ಟಿದರು ವಿಧವಿಧದ ಫಲವಳಿಗೇಯಾ’ ಇನ್ನೊಂದು ಹಾಡೂ ಹೇಳ್ಬಿಡು ಕೂಸೆ ಹೇಳಿ ಆಯಿ ಹೇಳಿದ್ರೆ ಓಡಿಹೋಪ ಮನಸ್ಸಾಗಿದ್ರೂ ಕೈಲಿದ್ದ ಹಾಡಿನ ಪಟ್ಟಿಯ ಪುಟ ತಿರ್ಗಿಸ್ತು ಕೈಬೆರ್ಳು. ಆಯಿಗೋ ಅಷ್ಟೂ ಸಲ್ಲು (ಚರಣ) ಹೇಳವು, ಎರಡ್ ಸಲ ಹೇಳದ್ನ ಒಂದ್ ಸಲ ಹೇಳಿ ಮುಂದ್ಹೋದ್ರೆ ಅಡಿಗೆಮನೆಯಿಂದ್ಲೇ ಬಯ್ತ್ಕಂಬದೇಯಾ. ಎಂಗಕ್ಕೋ ಅತ್ಲಾಗಿ ಗಂಡುಹುಡುಗ್ರು ಉರ್ಸ ಪಟಾಕಿ ಮೇಲೇ ಕಣ್ಣು.

ಸುರ್ ಸುರ್ ಕಡ್ಡಿ, ವಾಲೆಪಟಾಕಿ, ನೆಲಚಕ್ರ ಹೀಂಗೆ ಅಪ್ಪಯ್ಯ ತಂದ ಪಟಾಕಿನ ಹತ್ಸಲ ಲೆಕ್ಕ ಹಾಕಿ ಹಂಚ್ಗೆಂಡು ಮೆತ್ತಿನಮೇಲೆ ಸಮಾ ಇಟ್ಗತ್ತಿದ್ಯ. ಎಮ್ಮನೇಲಿ ಗಣಪತಿ ತತ್ತಿದ್ವಿಲ್ಲೆ, ಆದ್ರೆ ಎಲ್ಲಾ ನಮ್ಮಿ ಕಜ್ಜಾಯನೂ ಆಗಕಾಗಿತ್ತು. ‘ಚಕ್ಲಿ, ಪಂಚಗೆಜ್ಜ, ಲಡ್ಡಿಗೆ, ಅತ್ರಾಸ, ಕಾಯ್ಕಡುಬು, ಕೋಡ್ಬಳೆ ಕೊಡಬ್ಬೀ…’ ಮನಿಗೆ ಜೋಳಿಗೆ ಹಿಡ್ದು ಬಪ್ಪ ಬೇಡವರು (ಭಿಕ್ಷುಕರು) ಎಲ್ಲಾ ಕಜ್ಜಾಯದ ಹೆಸರನ್ನೂ ಹೇಳ್ತಾ ಇದ್ರೆ ಅರೆ, ಇವರಿಗೆ ಹೆಂಗ್ ಗೊತ್ತಾತು ನಮ್ಮಲ್ಲಿ ಇದ್ನೆಲ್ಲ ಮಾಡ್ತ ಅಂತ ಹೇಳಿ ಎಂಗಕ್ಕೆ ಆಶ್ಚರ್ಯ ಆಗ್ತಿತ್ತು. ಅಪ್ಪಯ್ಯಂಗೆ ಬೇರೆ ದಿವ್ಸದಾಂಗೆ ಹಬ್ಬದ್ ದಿನಾನೂ ಗಡಿಬಿಡಿಯೇ. ಒಂದ್ ಗಂಟೆಗೆ ಊಟಕ್ಕೆ ಬಟ್ಲು ಹಾಕದೇಯಾ. ಹನ್ನೆರಡೂವರೆಗೆ ಅಪ್ಪಯ್ಯ ಹೆಗಲ ಮೇಲಿನ ಶಾಲು ಕೊಡವಿ ಮೀಯಲೆ ಹೊಂಟ ಅಂದ್ರೆ ಆಯಿ ಕೈಕಾಲು ಮತ್ತೂ ಜೋರಾಗಿ ಕೆಲಸ ಮಾಡ್ತಿತ್ತು.

ಹಾಂ… ಮತ್ತೆ ಹಾಡಿಗೆ ಬಪ್ಪನ. ಆಯಿಯ ಖಜಾನೆಲ್ಲಿ ಅದೆಂಥೆಂಥ ಚೋಲೋ ಹಾಡು ಇತ್ತಲಿ ಹೇಳಿ ಈಗನಿಸ್ತಿರ್ತು. ಎಂಗವು ಪುಸ್ತಕ ನೋಡಿ ಹಾಡಿದ್ರೆ ಅಷ್ಟೂ ಹಾಡು ಆಯಿಯ ಬಾಯಲ್ಲೇ ಇತ್ತು. ಚೌತಿ ಹಬ್ಬದ ಮೂರನೇ ದಿನ, ಇಲಿಪಂಚಮಿ. ಆವತ್ತು ನಮ್ಮನೆಲ್ಲಿ ಗೌರಿ, ಗಣಪನ ಕಳಿಸ ಹಬ್ಬ. ಸಂಜೆ ದೇವರ ಎದ್ರಿಗೆ ಅಡ್ಡ ಕಂಬದಲ್ಲಿ ಕಟ್ಟಿದ್ದ ಅಷ್ಟೂ ಫಲವಳಿಗೆ ಬಿಚ್ಚಿ ಬುಟ್ಟಿಲ್ಲಿ ಹಾಕಿ ಮನೆ ಎದುರಿನ ತೋಟದ ಹೊಂಡದಲ್ಲಿ ಶಾಸ್ತ್ರೋಕ್ತವಾಗಿ ಅವನ್ನೆಲ್ಲ ಹಾಕಿಕ್ಕೆ ಬಪ್ಪ. ಅಲ್ಲಿಗೆ ಹಬ್ಬ ಮುಗತ್ತು ಹೇಳಿ ಅರ್ಥ. ಮನಿಗೆ ಬಂದ ಮ್ಯಾಲೆ ದೇವರ ಎದುರು ಕೂತ್ಗಂಡು ಭಕ್ತಿಂದ ಆಯಿ ಹಾಡ್ತಿದ್ದಿದ್ದು ಈಗ್ಲೂ ಎನ್ನ ಕಣ್ಣಿಗೆ ಕಟ್ಟಿದ ಹಾಂಗಿದ್ದು. ‘ಶುಭವಾಗಲಿ ಈ ಮನೆಗೆ, ಶುಭವಾಗಲಿ ಈ ಜಗಕೆ…’ ಅಬ್ಬ ಎಂಥ ಉದಾತ್ತ ಸಂದೇಶ ಆ ಹಾಡಿಂದು!

‘ಜೀವೇಶ್ವರರೆಂಬ…’ ಶಂಭು ಶಾಂಭವಿ ಕಥೆ, ಗೌರಿ ರುಕ್ಮಿಣಿ ಸಂವಾದ ‘ಗೌರಾದೇವಿಯೆ ನಿನ್ನ ತವರವರೆಲ್ಲ ಕ್ಷೇಮವೆ…’ ತವರುಮನೆಯಿಂದ ಮರಳಿದ ಗೌರಿಯನ್ನು ರುಕ್ಮಿಣಿ ವಿಚಾರ್ಸ ಹಾಡು.

ಮುಂದೆ ದೊಡ್ಡಬ್ಬ ಬಂದಾಗ ಇನ್ನೂ ಕೆಲ್ಸ ಜಾಸ್ತಿ. ತುಳಸಿಕಟ್ಟೆ ಕಟ್ಟದೇನು, ಮೇಲ್‌ಮೆತ್ತಿಂದ ಹಿಡ್ದು ಅಂಗ್ಳ, ಬಾಗ್ಲು ಎಲ್ಲ ಥಳಥಳ ಹೊಳೆಯಹಂಗೆ ಚೊಕ್ಕ ಮಾಡದೇನು. ಆಯಿ ತಿಂಗಳಾನುಗಟ್ಲೆಯಿಂದ ಗಣಪೆ ಕಾಯಿಂದ ಉಜ್ಜಿ ಉಜ್ಜಿ ತುಳಸಿಕಟ್ಟೆ ಫಳಫಳ ಹೊಳಿತಿತ್ತು. ಅದಕ್ಕೆ ತಾನೇ ಶ್ರದ್ಧೆಯಿಂದ ಹಚ್ಚಿದ ಬಣ್ಣ, ಕಟ್ಟೆಯ ಎದ್ರಿಗೆ ಸಗಣಿ, ಅಣಲೆಕಾಯಿ ಮಸಿ ಹಾಕಿ ಸಾರ್ಸಿ ಎಳೆಎಳೆಯಾಗಿ ಬಿಡ್ಸಿದ ರಂಗೋಲಿ ನೋಡಲೆ ಚೆಂದವೋ ಚೆಂದ. ಸಂಗ್ತಿಗೆ ಹಾಡಿನ ಪಟ್ಟಿ ತೆಗ್ದು ಎಲ್ಲಾ ಹಾಡೂ ವಾಲೆ ಮಡ್ಚಿ ಇಟ್ಕಳವು, ಹುಡ್ಕದು ಸಸಾರ ಆಗ್ತು ಹೇಳಿ. ಅಣ್ಣಯ್ಯ ಕೊಯ್ಕಂಡ್ ಬಂದ ಸೌತೆಕಾಯಿಗೆ ಕಣ್ಣು ಮೂಗು ಬಿಡಿಸಿ ಬಲೀವೇಂದ್ರನ್ನ ಮಾಡಿ ಮಣೆ ಮೇಲೆ ಗಂಗೆ ನೀರು ತುಂಬಿದ ತಂಬ್ಗೆ ಜತಿಗೆ ಇಡ್ತಿತ್ತು ಆಯಿ. ಬೆಳಿಗ್ಗೆ ಮುಂಚೆ ‘ಗಂಗಾಂಬಿಕಾ ದೇವಿ ಬಾರೆನ್ನ ಮನೆಗೆ…’ ಹಾಡೂ, ತುಪ್ಪ ಸಕ್ರೆಯ ನೈವೇದ್ಯವೂ ಎಂಗ್ಳನ್ನ ಬೆಳಗಾ ಮುಂಚೆನೇ ಎಬ್ಸ್ತಿತ್ತು.

ಮಧ್ಯಾಹ್ನಕ್ಕೆ ಬೂರೆ ಹಬ್ಬ. ಬೂರ್ಗಡುಬಿನ ಪರಿಮಳ ಮೂಗಿಗೆ ಅಡರ್ತಲಿ, ಆದ್ರೆ ದೇವರ ಮುಂದೆ ‘ಬಲಿಯು ಬಂದನು ಭೂ ತಳದಿ, ಇಳೆಗಾಗಿಯೆ ತಾ ಮುದದಿ’, ‘ಅಮೃತಾನ್ನವನುಣ್ಣೊ ಆನಂದಭರಿತ…’ ಹೀಂಗೆ ಅಷ್ಟೂ ಹಾಡು ಸಾರದ್ವಾರ ಹೇಳದೇಯಾ. ಮರ್ದಿನ ಅಂತೂ ಅದ್ಯಾನಮ್ಮಿ ಗಡ್ಬಡೆ ಅಂದ್ರೆ ಆಯಿಗೆ ಬೆಳಗಾಪದ್ರೊಳಗೆ ಮಿಂದ್ಕಂಡು ಹೊಸಾ ಸೀರೆ ಉಟ್ಕಂಡು ದನಕ್ಕೆಲ್ಲ ಆಸ್ರಿಗೆ ಮಾಡವು, ಕೊಟ್ಗೆ ತುಂಬಾ ದನಕರ್ಗ. ಅಣ್ಣಯ್ಯ ಬಿಸಿಬಿಸಿ ನೀರು ಸೋಕಿ ಪ್ರತಿ ದನಕ್ಕೂ ಸ್ನಾನ ಮಾಡಿಸ್ತಿದ್ದ. ಗೋಪೂಜೆಯ ಹಾಡು ಆಚೀಚೆ ಮನೆಗಳ ಕೊಟ್ಟಿಗೆಯಿಂದಾನೂ ಮೊಳಗ್ತಿತ್ತು. ‘ತಂದು ನೀಡಿದಳು ಗೋಪಿ, ಗೋಗ್ರಾಸವ…’, ‘ಕಾರ್ತೀಕ ಶುದ್ಧ ಪಾಡ್ಯ ಸ್ವಾತೀಯ ನಕ್ಷತ್ರ’. ಹೆಂಗಸರ ಹಾಡಿನ ಜೊತಿಗೆ ದನಕರು ಕುತ್ಗೆಗೆ ಕಟ್ಟಿದ್ ಗಂಟೆನೂ ಸ್ವರಗೂಡಸ್ತಿತ್ತು. ಗೊಂಡೆ ಹೂ, ಶೇಡಿ ಕೆಮ್ಮಣ್ಣಿನ ಚಿತ್ತಾರ ಕೊಟ್ಟಿಗೆಯ ನೋಟನೇ ಬದಲಾಯ್ಸಿಬಿಟ್ಟಿರ್ತಿತ್ತು. ಆಮೇಲೆ ಮನೆಯ ಹತ್ತಾರು ಕಡೆ ಪೂಜೆ ನಡ್ದಾಗ, ಅಲ್ಲೆಲ್ಲ ಕಡೆಯೂ ಆಯಾ ದೇವರ ಹಾಡು ಹೇಳಿ ಹೋಳಿಗೆ ಊಟ ಮಾಡದು. ಒರಳುಕಲ್ಲು, ಟ್ರೆಜೂರಿ ಎಲ್ಲದಕ್ಕೂ ಆವತ್ತು ವಿಶೇಷ ಅಲಂಕಾರ, ಊದಿನಕಡ್ಡಿ ಕರ್ಪೂರದ ಘಮಘಮವೂ ಸೇರ್ಕ್ಯಂಡು ಹಬ್ಬ ಅಂದ್ರೆ ದೊಡ್‌ಹಬ್ಬವೇ ಸೈ ಎನಿಸ್ತಿತ್ತು ಎಂಗಕ್ಕೆ. ಹಾಂ, ಅಲ್ಲೂ ಝುಗಟೆ ಸದ್ದಿನ ಮಧ್ಯೆ ‘ಝುಗುಝುಗಿಸುವ ಆರತಿ ಭಾಮೆ ಲಕ್ಷ್ಮೀದೇವಿಗೆ’ ಹಾಡು ಹೇಳದೇಯಾ.

ಮೇಲೆ ಹೇಳಿದ್ದೆಲ್ಲ ನಲವತ್ತೈವತ್ ವರ್ಷ ಹಿಂದಿನ್ ಮಾತು. ಆದ್ರೇನಾತು, ಈಗ್ಲೂ ಎಂಗಳ ಬದಿ ಹೆಣ್ಮಕ್ಕಿಗೆ ಸಂಗೀತದಲ್ಲಿ ಅಷ್ಟೇ ಆಸಕ್ತಿ ಇದ್ದು. ಈಗೀಗ ಹಿಂದೂಸ್ತಾನಿ, ಕರ್ನಾಟಕಿ ಕಲಿಯವು ಜಾಸ್ತಿ ಆಜ. ಹಾಡಿನ ಪುಸ್ತಕ ಎಲ್ಲರ ಮನೆಲ್ಲಿ ಈಗ್ಲೂ ಇದ್ದು. ಮನೆಮನೆಲ್ಲಿ ಹಬ್ಬ, ಹರಿದಿನ ನಡೀತಾ ಇರ್ತು ಖರೆ, ಹಾಡೂ ಹೇಳ್ತ, ಆದ್ರೆ ಮುಂಚಿನ ಹಾಂಗೆ ಅಷ್ಟೂ ಹಾಡು ಹೇಳವು ಹೇಳಿ ಇಲ್ಲೆ. ಹಾಡಲೆ ಮನೆಲ್ಲಿ ಮಕ್ಳೂ ಹೆಚ್ಚಿಲ್ಲೆ.

ಊರಿಂದ ದೂರ ಹೋದ ಎಂಗಳಂತವರಿಗೆ ಈಗ್ಲೂ ಎಮ್ಮೂರಿನ ಹಾಡು ಕೇಳ್ದಾಗ ಇಂಥಾ ನೆನಪಿನ ಬುತ್ತಿ ಎದುರಿಗೆ ಬತ್ತು. ■

